ಸಂಪರ್ಕದಿಂದ ತಪ್ಪಿಸಲು ಎಲ್ಲರೂ ಸೇರಿ ನನಗೆ ಯಾವಾಗಲೂ 'ರಂಗನ್ ಮನೆಯಲ್ಲಿಲ್ಲ' ಎಂದು ಹೇಳತೊಡಗಿದ್ದರು. ಯಾವುದೇ ಸುಳ್ಳಿಗೂ ಒಂದು ಭೂಮಿಕೆ ಇರಬೇಕಲ್ಲವೆ.

ಒಂದು ತಿಂಗಳ ನಂತರ ನಾನು ಆಫೀಸಿಗೆ ಹೋದಾಗ... ಕಾತರದಿಂದ ಛೇಂಬರಿಗೆ ಹೋದಾಗ ರಂಗನ್ ಅಲ್ಲಿರಲಿಲ್ಲ. ಇನ್ನೂ ಒಂದು ವಾರದ ರಜೆಯಲ್ಲಿದ್ದಾರೆಂದು ಹೇಳಿದರು. ಕಡೆಗೂ ತಿಳಿಯಿತು. ರಂಗನ್ ಮದುವೆಯಾಗಿ ಒಂದು ವಾರ ಮಾತ್ರವಾಗಿದೆ. ರಾತ್ರೋ ರಾತ್ರಿ ಬಿಳಿಗಿರಿ ರಂಗನ ಬೆಟ್ಟಕ್ಕೆ ಹೋಗಿ ಅಲ್ಲೇ ಮದುವೆ ಮಾಡಿಕೊಂಡು ಕುಟುಂಬದವರು ಹಿಂತಿರುಗಿದ್ದಾರೆಂದು!

ಚೇತರಿಸಿಕೊಳ್ಳಬೇಕಾಯಿತು. ಒಂದು ತಿಂಗಳು ರಜೆ ಹಾಕಿ ವರ್ಗಾವಣೆಗೆ ಅರ್ಜಿಕೊಟ್ಟೆ. ಎಂಟು ದಿನದ ಮೇಲೆ ಬಂದು ಬೆಲ್ ಮಾಡಿದ. ಅವನೇ ಎಂದು ಗೊತ್ತಾಯಿತು. ತೆಗೆಯಲಿಲ್ಲ. ದಿನವೂ ಬರತೊಡಗಿದ. ನಾಕೈದು ದಿನಗಳು ಅಷ್ಟೇ... ಎದೆಯೊಳಗೆ ಹೆಪ್ಪುಗಟ್ಟಿದ್ದ ಪ್ರೇಮ ಮಂಜು ಕರಗಿ ಹರಿಯಲಾರಂಭಿಸಿತು.

ಪಟಪಟನೆ ಹೊಡೆದೆ. "ನೀನೊಬ್ಬ ಮೋಸಗಾರ. ನೀನಿನ್ನು ಯಾವತ್ತೂ ಬರಬೇಡ" ಅಂದೆ. ಮಾರನೆ ದಿನ... ಮತ್ತೆ ಬಂದ. ಮತ್ತೆ ಬಂದ ಬರುತ್ತಲೇ ಹೋದ. ಈ ಬರುವಿಕೆಯಲ್ಲಿ ಸುಳ್ಳಿನ ಬೀಜ ಅಂಕುರವಾಯಿತು. ಈ ಸುಳ್ಳು ಹುಟ್ಟಿದ್ದಾದರೂ ಹೇಗೆಂದರೆ...

"ಫಿಲೋ... ಈ ದಿನ ನಾನು ನಿನ್ನ ಮನೆಗೆ ಬರುವುದಿಲ್ಲ" ಎಂದ. ಅರು ಮತ್ತು ಅವನು ಮದುವೆಯಾದ ಆ ದಿನಗಳ ಹೊಸತರಲ್ಲಿ ನಾನು ಕೇಳಿದ್ದೆ "ಏನು? ಅವಳೊಬ್ಬಳು ಸಾಲದೂಂತ ನನ್ನ ಹತ್ತಿರಾನು..." "ಇಲ್ಲ ಫಿಲೋ ನಿಜವಾಗಿ ನಮ್ಮಿಬ್ಬರ ನಡುವೆ ಅದು ನಡೆದೇ ಇಲ್ಲ. ನಾನು ನಿನ್ನ ಹೊರತು ಯಾರನ್ನು ಹಾಗೆ ಪರಿಭಾವಿಸಿಕೊಳ್ಳಲಾರೆ. ನನ್ನ ಬದುಕಿನ ಒಬ್ಬಳೇ ಹೆಣ್ಣೆಂದರೆ... ಅದು ನೀನೇ" ಎಂದ. ಎದೆ ಉಬ್ಬಿತು. ಸಂತಸ, ಹೆಮ್ಮೆಗಳಿಂದ... ಆದರೂ... ಮದುವೆಯಾಗಿ ಇವನನ್ನೇ ನಂಬಿಕೊಂಡ ಹೆಣ್ಣಿಗೆ ಆಗುತ್ತಿರಬಹುದಾದ ನಿರಾಶೆಗೆ ನನ್ನ ಮನಸ್ಸು ಚುರುಕ್ಕೆಂತು. "ತಪ್ಪು ರಂಗನ್, ಬೇಕಾಗಿಯೋ ಬೇಡವಾಗಿಯೇ ನೀನವಳ ಗಂಡ. ಇದರಲ್ಲಿ ಅರುವಿನದೇನೂ ತಪ್ಪಿಲ್ಲ. ನೀನವಳನ್ನು ಹಾಗೆಲ್ಲ ಕಡೆಗಣಿಸಬಾರದು, ಯಾವ ವಿಷಯದಲ್ಲೂ" ಎಂದೆ.

"ಇಲ್ಲ ನನ್ನ ಕೈಯ್ಯಲ್ಲಾಗುತ್ತಿಲ್ಲ" ಎಂದ. ನಾನು ಹಗುರಾಗಿ ಚೇಡಿಸಿದೆ, "ಡಬಲ್ ಧಮಾಕಾ ಯಾಕೆ ಬೇಡ ಹೇಳು" ಎಂದು ಕಣ್ಣು ಹೊಡೆದೆ. "ಥೂ ಪೋಲಿ" ಎಂದು ನಾಚಿದ. ಮುಂದೆ ಇನ್ನೊಂದು ಬಾರಿ ನಾನವನಿಗೆ ಈ ಕುರಿತು ಹೇಳಬೇಕಾಗಲಿಲ್ಲ. ಈ ಸುಳ್ಳು ಹುಟ್ಟಿದ್ದಾದರೂ ಹೇಗೆಂದರೆ...

"ಫಿಲೋ... ಅರು ನನ್ನನ್ನು ಅನುಮಾನಿಸುತ್ತಿದ್ದಾಳೆ. ಯಾರೋ ಹೇಳಿರಬೇಕು. ಕೆಲ ದಿನ ನಾನು ನಿನ್ನ ಮನೆಗೆ ಬರುವುದಿಲ್ಲ ಪ್ಲೀಸ್" ಎಂದ.

"ಓ.ಕೆ. ಫೈನ್, ನಿನ್ನ ಕಾಟ ತಪ್ಪಿತು" ಎಂದೆ. ವಾರಗಟ್ಟಲೆ, ತಿಂಗಳುಗಟ್ಟಲೆ ಬರಲಿಲ್ಲ. ಅವನ ಹೆಂಡತಿ ತವರಿಗೆ ಹೋಗುವವರೆಗೂ! ಕಳಕೊಂಡಿದ್ದನ್ನು ದುಪ್ಪಟ್ಟಾಗಿ ಪಡಕೊಳ್ಳುವ ಹಟದಲ್ಲಿ ಬರತೊಡಗಿದ. ನನಗೂ ಬೇಕಾಗಿತ್ತು.

ಒಂದು ದಿನ... ರಂಗನ್ ಆ ದಿನ ನನ್ನ ಮನೆಗೆ ಬರುವುದಿಲ್ಲವೆಂದಿದ್ದ. ಅವನ ಮನೆಗೂ ಹೋಗಿರಲಿಲ್ಲ. ಅವನ್ಯಾವುದೋ ಹಳೆಯ ಗೆಳೆಯನ ಜೊತೆ ಒಂದು ಪಾರ್ಟಿಯಲ್ಲಿದ್ದುದು ನನಗೆ ಗೊತ್ತಿತ್ತು. ಅವಳಿಗೆ... ಪಾಪ, ಮೀಟಿಂಗ್ ಎಂದಿದ್ದನಂತೆ.